# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.

ಸಿ.ಸಿ. ನಂ.**2062/2024**

| | | |
|---|---|---|
| ಆರೋಪಿಯ ಹೆಸರು | : | ಮುತ್ತಪ್ಪ ಹನಗಂಡಿ |
| ತಂದೆಯ ಹೆಸರು | : | ಯಲ್ಲಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ರಬಕವಿ, ತಾಃ ರಬಕವಿ-ಬನಹಟ್ಟಿ |

ಆರೋಪಿಯ ಹೇಳಿಕೆ ಕಲಂ **313** ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ

ಪ್ರಶ್ನೆ - 1) ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರಃ -

ಪ್ರಶ್ನೆ - **2)** ಪಿ.ಡಬ್ಲ್ಯೂ **-1** ಸುಜಾತಾ ಗಂಃ ಮಂಜುನಾಥ ಬಜ್ಜಿಗಾರ ಇವರು ತಮ್ಮ ಸಾಕ್ಷಿಯಲ್ಲಿ "ಆರೋಪಿತನು ನನ್ನ ಕಡೆಯಿಂದ ತನ್ನ ಪ್ರಾಪಂಚಿಕ ಅಡಚಣೆಗೋಸ್ಕರದ ಸಲುವಾಗಿ ರೂ. **3,00,000/-** ಅಂತಾ ಕೈಗಡ ಸಾಲ ವಿನಂತಿಸಿಕೊಂಡಿದ್ದು, ನಂತರ ನಾನು ಪರಿಚಯದ ನಾತೆಯಿಂದ ಆರೋಪಿತನಿಗೆ ಸಾಲವನ್ನು ನೀಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕಃ 25.04.2024 ರಂದು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಲಿ ಶಾಖೆ ರಬಕವಿ ಬ್ಯಾಂಕಿನ ಚೆಕ್ ನಂ.237722 ರ ಮೇಲೆ ರೂ.**3,00,000/** ಗಳನ್ನು ಪಾವತಿ ಮಾಡುವ ಉದ್ದೇಶದಿಂದ ಅಂದೇ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾನೆ. ಸದರಿ ಚೆಕ್ಕನ್ನು ನನ್ನ ಖಾತೆ ಇರುವ ಬ್ಯಾಂಕ ಆಫ್ ಬರೋಡಾ ಶಾಖೆ ರಬಕವಿಯಲ್ಲಿ ನಗದೀಕರಣಕ್ಕಾಗಿ ಕೊಟ್ಟಿದ್ದು, ಆರೋಪಿಯ ಖಾತೆಯಲ್ಲಿ "ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹದೊಂದಿಗೆ ದಿಃ **29.04.2024** ರಂದು ಮರಳಿ ಬಂದಿರುತ್ತದೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ **?**

ಉತ್ತರಃ -

ಪ್ರಶ್ನೆ - **3)** ಪಿ.ಡಬ್ಲ್ಯೂ**-1** ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ತನ್ನ ವಕೀಲರ ಮುಖಾಂತರ ದಿನಾಂಕಃ 20.05.2024 ರಂದು ನೋಟಿಸನ್ನು ನೀಡಿದ್ದು ಸದರಿ ನೋಟೀಸನ್ನು ದಿಃ 22.05.2024 ರಂದು ಆರೋಪಿತನು ಸ್ವೀಕರಿಸಿದ್ದು, ಇಲ್ಲಿಯವರೆಗೂ ಸಹ ಹಣ ಕೊಡುವ ವ್ಯವಸ್ಥೆ

ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಹೇಳುತ್ತಾರೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ - ಸುಳ್ಳು

ಪ್ರಶ್ನೆ - **4)** ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುವುದು ಇದೆಯಾ **?**

ಉತ್ತರಃ - ಇದ

ಪ್ರಶ್ನೆ - **5)** ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇದೆಯಾ**?**

ಉತ್ತರಃ - ಇದ .

ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ
ದಿನಾಂಕಃ **14.11.2025**

ಪ್ರ. ದ. ನ್ಯಾ.. ದಂಡಾಧಿಕಾರಿಗಳು,
ಬನಹಟ್ಟಿ .